Code No.: **213 NS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

Malleshwaram, Bengaluru–560003.

## ಕರ್ನಾಟಕ ಮುಕ್ತ ಶಾಲೆ ಪರೀಕ್ಷೆ, ಮೇ- 2024

## Karnataka Open School Examination, May - 2024

**MODEL QUESTION PAPER / ಮಾದರಿ ಪ್ರಶ್ನೆ ಪತ್ರಿಕೆ**

| | | |
|---|---|---|
| Subject / ವಿಷಯ | : | **SOCIAL SCIENCE<br>ಸಮಾಜ ವಿಜ್ಞಾನ** |
| Maximum Marks / ಗರಿಷ್ಠ ಅಂಕಗಳು | : | 100 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time allotted to read the instructions / ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ | : | 15 minutes / 15 ನಿಮಿಷಗಳು |

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates:***

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ–ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯ ತಕ್ಕದ್ದು.

   Candidate should write their Register Number on the Answer Booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ–ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.

   Candidate should write their Main Answer Booklet Number on the additional answer sheets in the space provided.

3. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ–ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ–ಪುಸ್ತಿಕೆಯನ್ನು ಮೌಲ್ಯ ಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ–ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

5. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.

   Use black / blue ball point pen only to write the answers.

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿರಿ.** **8×1=8**

1) ವಿಶೇಷ ಉಕ್ಕುಗಳು ಮತ್ತು ಉಕ್ಕಿನ ಎರಕಗಳನ್ನು ತಯಾರಿಸಲು ಬಳಸುವ ಲೋಹ ____________ .

2) ವಿಶ್ವಸಂಸ್ಥೆಯ ಸನ್ನದು ರಚಿಸಿದ ಸ್ಥಳ ____________ .

3) ಸಾಮಾಜಿಕ ವಲಯದಲ್ಲಿ ಜಾಗತೀಕರಣದ ಮೇಲೆ ಮಹತ್ವದ ಪರಿಣಾಮ ಬೀರಿದ ಅಂಶ ____________ .

4) ಇಸ್ಲಾಂ ಧರ್ಮದ ಸ್ಥಾಪಕ ____________ .

5) ಸ್ವಾತಂತ್ರ್ಯ ಕಾಲದ ಮೊದಲ ಪೆಟ್ರೋಲಿಯಂ ಶುದ್ಧೀಕರಣ ಇರುವ ಸ್ಥಳ ____________ .

6) ಪ್ರಾಣಿ ಮತ್ತು ವ್ಯವಸಾಯ ತ್ಯಾಜ್ಯ ವಸ್ತುವಿನಿಂದ ಪಡೆಯುವ ಅನಿಲ ____________ .

7) ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರು ____________ .

8) ಭಾರತದ ಕೇಂದ್ರ ಶಾಸಕಾಂಗವನ್ನು ____________ ಎಂದು ಕರೆಯುತ್ತಾರೆ.

**II. ಕೆಳಗೆ ಕೊಟ್ಟಿರುವ ಮೊದಲ ಜೋಡಿ ಪದಗಳ ಸಂಬಂಧವನ್ನು ಗ್ರಹಿಸಿ ಎರಡನೆಯ ಜೋಡಿಯಲ್ಲಿ ಬಿಟ್ಟಿರುವ ಪದವನ್ನು ಬರೆಯಿರಿ.** **3×1=3**

9) ದೂರದರ್ಶಕ : ಗೆಲಿಲಿಯೋ : : ಗುರುತ್ವಾಕರ್ಷಣೆ : ____________

10) ವಿಯಾಟ್ನಾಂ : ಹೊಚಮಿನ್ : : ಚೈನಾ : ____________

11) ಜೊರಾಷ್ಟ್ರಿಯನ್ ತತ್ವ : ಪಾರಸಿ : : ಜುಡಾ ತತ್ವ : ____________

**III. ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ.** **4×1=4**

12) ಬಂಗಾಳದ ವಿಭಜನೆ

13) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ

14) ಲಕ್ನೋ ಒಪ್ಪಂದ

15) ಮಾರ್ಲೆ ಮಿಂಟೋ ಸುಧಾರಣೆ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರ ಬರೆಯಿರಿ.** **5×1=5**

16) ರಾಮಚರಿತ ಮಾನಸ ಕೃತಿಯನ್ನು ರಚಿಸಿದವರು ಯಾರು?

17) ಸಮಾನ ಅವಕಾಶ ಎಂದರೇನು?

18) ಹಿಮಾಲಯದ ಅತ್ಯಂತ ಎತ್ತರವಾದ ಶಿಖರ ಯಾವುದು?

19) ಮಿಶ್ರ ಬೇಸಾಯದ ಅರ್ಥ ತಿಳಿಸಿ.

20) ಸುಭಾಷ್ ಚಂದ್ರ ಬೋಸರಿಗಿದ್ದ ಬಿರುದೇನು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 15×2=30**

21. ಗೋಧಿ ಬೆಳೆಗೆ ಬೇಕಾಗುವ ಭೌಗೋಳಿಕ ಸ್ಥಿತಿಯನ್ನು ತಿಳಿಸಿ.

22. ಜವಳಿ ಕೈಗಾರಿಕೆಯು ಯಾವ ಕಚ್ಚಾವಸ್ತುಗಳನ್ನು ಅವಲಂಬಿಸಿದೆ.

23. ಗಾಂಧಿ–ಇರ್ವಿನ್ ಒಪ್ಪಂದದ ಕರಾರುಗಳೇನು?

24. ಜನಸಂಖ್ಯೆ ಮತ್ತು ಜನಸಾಂದ್ರತೆಗಿರುವ ವ್ಯತ್ಯಾಸವೇನು?

25. "ಮುಸ್ಲಿಂ ಸಮಾಜದ ಸುಧಾರಣೆಯಲ್ಲಿ ಸೈಯದ್ ಅಹಮದ್ ಖಾನ್ ಪಾತ್ರ ಮಹತ್ವದ್ದಾಗಿದೆ". ಈ ಹೇಳಿಕೆಯನ್ನು ಸಮರ್ಥಿಸಿ.

26. ನವ ಜವಾನ್ ಭಾರತ್ ಸಭಾದ ಗುರಿಗಳೇನು?

27. ಸಾಮಾಜಿಕ ನ್ಯಾಯವು ಯಾವ ವಿಷಯಗಳನ್ನು ಆಧರಿಸಿದೆ.

28. ಭಾರತದ ಮಂತ್ರಿಮಂಡಲದ ನಿಯೋಗದಲ್ಲಿ ರಚನೆಯಾದ ಅಂಶಗಳನ್ನು ತಿಳಿಸಿ.

29. ಮಾನವ ಹಕ್ಕುಗಳ ವಿಧಗಳನ್ನು ಪಟ್ಟಿ ಮಾಡಿ.

30. "ಭಾರತದ ಸರ್ಕಾರವು ಮಹತ್ವಪೂರ್ಣ ಗ್ರಾಮ ಆರೋಗ್ಯದ ಯೋಜನೆಗಳನ್ನು ಜಾರಿಗೊಳಿಸಿದೆ". ಅವುಗಳನ್ನು ತಿಳಿಸಿ.

31. ಸಂವಿಧಾನದ ಪ್ರಸ್ತಾವನೆಯಲ್ಲಿ ರಕ್ಷಿಸಿರುವ ಆದರ್ಶಗಳಾವುವು?

32. ರಾಜ್ಯ ನಿರ್ದೇಶಾತ್ಮಕ ತತ್ವಗಳ ವರ್ಗೀಕರಣದ ವಿಭಾಗಗಳನ್ನು ಹೆಸರಿಸಿ.

33. ಕೇಂದ್ರ ಕಾರ್ಯದರ್ಶಿಯ ಕಾರ್ಯಗಳಾವುವು?

34. ರಾಜ್ಯ ಶಾಸಕಾಂಗದ ಸದಸ್ಯನಾಗಲು ಇರಬೇಕಾದ ಅರ್ಹತೆಗಳೇನು?

35. ಸಾರ್ವಜನಿಕ ಅಭಿಪ್ರಾಯದಲ್ಲಿ ಏಜೆನ್ಸೀಸ್ ನೀಡಿರುವ ವಿಧಾನಗಳಾವುವು?

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10×3=30**

36. ಫ್ರೆಂಚ್ ಕ್ರಾಂತಿಗೆ ಅನೇಕ ಮಹತ್ವದ ಅಂಶಗಳು ಕಾರಣವಾಗಿದೆ. ಅವುಗಳನ್ನು ವಿಶ್ಲೇಷಿಸಿ ಬರೆಯಿರಿ.

37. ಜಲ ಮಾಲಿನ್ಯಕ್ಕೆ ಕಾರಣಗಳೇನು?

38. ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

39. ರಾಷ್ಟ್ರಗಳ ಒಕ್ಕೂಟದ ಗುರಿಗಳನ್ನು ತಿಳಿಸಿ.

40. ಪೂರ್ವ ತೀರ ಪ್ರದೇಶದ ಪ್ರಾಮುಖ್ಯತೆಯನ್ನು ತಿಳಿಸಿ.

41. ಪ್ರವಾಸೋದ್ಯಮದ ಅನುಕೂಲಗಳಾವುವು?

42. ವಿದೇಶಾಂಗ ನೀತಿಯ ಉದ್ದೇಶಗಳೇನು?

43. ಜಿಲ್ಲಾ ಪರಿಷತ್ತಿನ ಕಾರ್ಯಗಳನ್ನು ಪಟ್ಟಿ ಮಾಡಿ.

44. ಜಾತಿಯ ಮುಖ್ಯ ಲಕ್ಷಣಗಳನ್ನು ತಿಳಿಸಿ.

45. ಭಾರತದ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಿ

**VII. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ 8 ಅಥವಾ 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4×4=16**

46. ಪ್ರಪಂಚದ ನಾಗರಿಕತೆಗೆ ಭಾರತವು ನೀಡಿರುವ ಕೊಡುಗೆಗಳನ್ನು ವಿಶ್ಲೇಷಿಸಿ ಬರೆಯಿರಿ.

47. ಪೌರತ್ವವನ್ನು ಕಳೆದುಕೊಳ್ಳುವ ವಿಧಾನಗಳನ್ನು ಕುರಿತು ಬರೆಯಿರಿ.

48. "1857ರ ದಂಗೆಗೆ ರಾಜಕೀಯ ಮತ್ತು ಸಾಮಾಜಿಕ ಕಾರಣಗಳು ಪ್ರಮುಖ ಪಾತ್ರವನ್ನು ವಹಿಸಿವೆ".
ಈ ಹೇಳಿಕೆಯನ್ನು ಸಮರ್ಥಿಸಿ.

49. ಮಳೆ ನೀರಿನ ಕುಯಿಲಿನ ವಿವಿಧ ವಿಧಾನಗಳನ್ನು ಪಟ್ಟಿ ಮಾಡಿ.

**VIII.**

50. ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಕೆಳಗಿನವುಗಳನ್ನು ಗುರುತಿಸಿ. **1+3=4**

a) ಕಲ್ಪಕಂ

b) ಕರ್ಕಾಟಕ ಸಂಕ್ರಾಂತಿ ವೃತ್ತ

c) ಹಾಲ್ದಿಯ